# ಸಂತ್ರಸ್ತರ ಬದುಕಿಗೆ ಸಾಂತ್ವನ ನೀಡಿದ ಸಂತ

◆ ಸ್ವಾಮಿ ರಾಘವೇಶಾನಂದ

[ಪಾದ್ರಿ ಡೇಮಿಯನ್ (1840-89) ಬೆಲ್ಜಿಯಂ ದೇಶದವರು. ಹಲವು ವರ್ಷಗಳ ಕಾಲ ಹವಾಯ್ ದ್ವೀಪಗಳಲ್ಲಿ ಪ್ರಚಾರ ಮಾಡಿದ ನಂತರ ತಾವೇ ಬಯಸಿ ಕುಷ್ಠರೋಗಿಗಳ ಸೇವೆಯಲ್ಲಿ ನಿರತರಾದರು. ಕುಷ್ಠರೋಗಕ್ಕೆ ಸಮರ್ಪಕವಾದ ಚಿಕಿತ್ಸೆ ಲಭ್ಯವಿಲ್ಲದೆ, ಅವರ ಸೋಂಕು ಇತರರಿಗೆ ಹರಡದಂತೆ ರೋಗಿಗಳನ್ನು ದೂರ ಇಡುವುದೊಂದೇ ಆಗಿನ ಜನರಿಗೆ ಗೊತ್ತಿದ್ದ ಉಪಾಯ. ಡೇಮಿಯನ್ ಕುಷ್ಠರೋಗಿಗಳ ಮಧ್ಯೆ ಬದುಕಲು ಹೋಗಿ, ಆ ರೋಗಕ್ಕೆ ಬಲಿಯಾಗಿ ಅಸುನೀಗಿದರು. ಅವರ ಒಂದು ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟಿರುವ ಸ್ವಾಮಿ ರಾಘವೇಶಾನಂದರು ಬೆಂಗಳೂರಿನ ಹಲಸೂರಿನಲ್ಲಿರುವ ರಾಮಕೃಷ್ಣ ಮಠದ ಅಧ್ಯಕ್ಷರು.]

ಭಗವಂತನ ಸಾಕ್ಷಾತ್ಕಾರ ಪಡೆದಿದ್ದಾರೆಂದು ಪ್ರಸಿದ್ಧರಾಗಿದ್ದ ಒಬ್ಬ ವ್ಯಕ್ತಿಯನ್ನು ಯಾರೋ ಕೇಳಿದರು, "ತಾವು ಆಧ್ಯಾತ್ಮಿಕತೆಯ ಶಿಖರವನ್ನು ಮುಟ್ಟಿದ್ದೀರಿ. ನಿಮ್ಮ ಯಶಸ್ಸಿನ ರಹಸ್ಯವೇನು?"

ಅದಕ್ಕೆ ಅವರು ನಮ್ರತೆಯಿಂದ ಹೇಳಿದರು, "ನಾನು ಶಿಖರಕ್ಕೆ ಏರಿದ್ದೇನೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಆದರೆ ನಾನು ಮಾಡಿದ ಒಂದು ಕಾರ್ಯ ಮಾತ್ರ ನನಗೆ ಗೊತ್ತು. ನಾನು ಏನನ್ನು ಪಡೆದೆನೋ ಅದನ್ನು ಎಲ್ಲರಿಗೂ ಹಂಚಿದ್ದೇನೆ." ಕ್ರೈಸ್ತ ಪಾದ್ರಿ ಡೇಮಿಯನ್ ಜೀವನದ ರಹಸ್ಯವೂ ಅದೇ ಆಗಿತ್ತು. ತಾನು ಏನನ್ನು ಪಡೆದಿದ್ದನೋ ಅದನ್ನು ಎಲ್ಲರಿಗೂ ಹಂಚಿದ್ದ. ಜೀವನ ಬರಿಯ ಸಂಗ್ರಹಕ್ಕಾಗಿ ಅಲ್ಲ; ದೇವರ ಸೇವೆಗಾಗಿ ಮತ್ತು ಅವನ ಸೃಷ್ಟಿಯಲ್ಲಿರುವ ನೊಂದ ಜೀವಿಗಳಿಗೆ ನಮ್ಮಲ್ಲಿರುವುದನ್ನು ಹಂಚುವುದಕ್ಕಾಗಿ ಎಂದು ಅವನು ಅರ್ಥ ಮಾಡಿಕೊಂಡಿದ್ದ. ಅವನ ಗುರುವಿನ ಮಾತುಗಳು ಸದಾ ಅವನ ಹೃದಯದಲ್ಲಿ ಮಿಡಿಯುತ್ತಿದ್ದವು, "ಯಾರು ತನ್ನ ಜೀವನವನ್ನು ರಕ್ಷಿಸಿಕೊಳ್ಳುತ್ತಾನೆಯೋ, ಅವನು ಕಳೆದುಕೊಳ್ಳಲೂ ಬೇಕು."

ಡೇಮಿಯನ್ ತನ್ನ ಜೀವನವನ್ನು ಕುಷ್ಠರೋಗಿಗಳ ಸೇವೆಯಲ್ಲಿ ಕಳೆಯಲು ನಿರ್ಧರಿಸಿದ್ದ. ಅವನು ರೋಗಿಗಳ ಗಾಯಗಳಲ್ಲಿ ಮತ್ತು ಸಹಿಸಲು ಅಸಾಧ್ಯವಾದ ಹುಣ್ಣುಗಳಲ್ಲಿ ತನ್ನ ತಂದೆಯಾದ ಕ್ರೈಸ್ತನ ಮೃದು ಮುಖವನ್ನು ಕಂಡ. ಅವರ ಕತ್ತಲಿನ, ಭರವಸೆಯಿಲ್ಲದ ಜೀವನಕ್ಕೆ ಬೆಳಕನ್ನು, ಸಂತೋಷವನ್ನು ತಂದ.

ಸಮಾಜ ಈ ಕುಷ್ಠರೋಗಿಗಳನ್ನು ಅಸ್ಪೃಶ್ಯರಂತೆ ಕಾಣುತ್ತಿತ್ತು. ಹವಾಯಿ ಸರ್ಕಾರ ಇವರೆಲ್ಲರನ್ನೂ ದೂರ ಇಡುವಂತೆ ಒಂದು ಮಸೂದೆಯನ್ನು ಜಾರಿಗೆ ತಂದಿತ್ತು. ಜನಸಾಮಾನ್ಯರೊಡನೆ ಅವರು ಯಾವ ಸಂಪರ್ಕವನ್ನೂ ಇಟ್ಟುಕೊಳ್ಳಲು ಅವಕಾಶ ಕೊಡಲಿಲ್ಲ. ಹವಾಯಿ ದ್ವೀಪಗಳಲ್ಲಿ ಒಂದಾದ ಮಲಕಾಯ್ ಎಂಬೆಡೆಗೆ ಸರ್ಕಾರ ಎಲ್ಲರನ್ನೂ ಒಟ್ಟಾಗಿ ಸಾಗಿಸಿತು. ಒಮ್ಮೆ ಅಲ್ಲಿ ತಲುಪಿದ ಮೇಲೆ ಅಲ್ಲಿಂದ ಯಾರೂ ಹಿಂದಿರುಗುವ ಹಾಗಿಲ್ಲ. ಡೇಮಿಯನ್ ಇಂತಹ ನತದೃಷ್ಟರ ಸೇವೆಗಾಗಿ ತನ್ನ ಜೀವನವನ್ನು ಮುಡಿಪಾಗಿಟ್ಟ. ಅದಕ್ಕಾಗಿ ತಾನು ಮಾಡಬೇಕಾಗಿದ್ದ ತ್ಯಾಗದ ಅರಿವು ಅವನಿಗಿತ್ತು. ಆಗ ಅವನ ವಯಸ್ಸು ಸುಮಾರು ೩೦ ವರ್ಷ ಮಾತ್ರ. ತಾರುಣ್ಯದ ಸುಖದ ಅನುಭವಗಳು ಅವನ ಮುಂದಿದ್ದವು. ಸುದೃಢ ಶರೀರವಿತ್ತು. ಐಹಿಕ ಜೀವನಕ್ಕೆ ಬೇಕಾದ ಸಂಪತ್ತನ್ನು ಸಂಪಾದಿಸುವ ಶಕ್ತಿ ಅವನಲ್ಲಿತ್ತು. ಆದರೆ ಎಲ್ಲವನ್ನೂ ತ್ಯಾಗ ಮಾಡಲು ನಿರ್ಧರಿಸಿದ. ಆ ಸಂದರ್ಭದಲ್ಲಿ ಅವನ ಸ್ನೇಹಿತರು ಅವನನ್ನು ಎಚ್ಚರಿಸಿದರು, "ಡೇಮಿಯನ್, ಹುಚ್ಚನಂತೆ ವರ್ತಿಸಬೇಡ. ನೀನು ಆ ರೋಗಿಗಳ ಮಧ್ಯೆ ಇದ್ದಲ್ಲಿ ನೀನೂ ಆ ರೋಗಕ್ಕೆ ಬಲಿಯಾಗುವೆ. ಅದು ಅಂಟುರೋಗ." ಇತರರೂ ತಮ್ಮ ಧ್ವನಿ ಸೇರಿಸಿದರು, "ಡೇಮಿಯನ್, ಎಚ್ಚರಿಕೆ! ಕುಷ್ಠ ರೋಗಿಗಳ ಜೀವನ ಅಸಹ್ಯಕರವಾದ ಜೀವನ. ಅದು ಹಿಂಸಾತ್ಮಕ ಮತ್ತು ನಿಧಾನವಾಗಿ ಸಾವಿನೆಡೆಗೆ ಕೊಂಡೊಯ್ಯುತ್ತದೆ." ಇನ್ನೂ ಕೆಲವರು ಎಚ್ಚರಿಸಿದರು, "ಡೇಮಿಯನ್, ಒಮ್ಮೆ ನೀನು ಅವರಿರುವಲ್ಲಿ ಹೋದರೆ ಮತ್ತೆ ಹಿಂದಿರುಗುವ ಹಾಗಿಲ್ಲ. ದೀರ್ಘವಾದ, ಏಕಾಂಗಿ ಜೀವನ ನಡೆಸಬೇಕಾದ ನಿನ್ನ ಮುಂದಿನ ಜೀವನದ ಬಗ್ಗೆ ಯೋಚಿಸು. ಯಾವ ಬಂಧುಬಾಂಧವರೂ, ಸ್ನೇಹಿತರೂ ಇಲ್ಲದ ನಿನ್ನ ಅಂತ್ಯ ಜೀವನದ ಬಗ್ಗೆ ಯೋಚಿಸು."

ಆದರೆ ಡೇಮಿಯನ್ ದೃಢ ನಿರ್ಧಾರ ಮಾಡಿದ್ದ. ಒಂದು ಮಾತಿಗೂ ಉತ್ತರ ಕೊಡಲಿಲ್ಲ. ಸುಮ್ಮನೆ ಮುಗುಳು ನಗುತ್ತಿದ್ದ. ಅವನಿಗೆ ಪ್ರಕೃತಿಯಿಂದ ಸಹಾಯ, ಸಾಂತ್ವನ ದೊರೆಯಿತು. ತೋಟದ ಹೂವುಗಳು ಸಂತೋಷ ಸೂಚಿಸಿದವು. ಮರಗಳು ಆನಂದದಿಂದ ತಲೆಯಾಡಿಸಿದವು. ಸೂರ್ಯ ಮೋಡಗಳ ಮರೆಯಿಂದ ಹೊರಬಂದು ಅವನ ಮೇಲೆ ಬೆಳಕು ಬೀರಿ ಆಶೀರ್ವದಿಸಿದ.

"ನಾನು ಮಲಕಾಯ್‌ಗೆ ಹೋಗುತ್ತಿದ್ದೇನೆ", ಎಂದು ತನ್ನ ತಂದೆ ತಾಯಿಗಳಿಗೆ ಪತ್ರ ಬರೆದ, "ಆ ಬಡ ಜೀವಿಗಳ ಸೇವೆಗಾಗಿ ನನ್ನ ಜೀವನವನ್ನು ಮುಡಿಪಾಗಿಡುತ್ತೇನೆ. ಪಾಪ, ಅವರಿಗೆ ದೈಹಿಕ ಸುಖವೂ ಇಲ್ಲ, ಆಧ್ಯಾತ್ಮಿಕ ಏಳ್ಗೆಯೂ ಇಲ್ಲ. ಇದನ್ನು ನೆನೆದಾಗಲೆಲ್ಲ ನನ್ನ ಹೃದಯದ ರಕ್ತ ಅಂತರಾಳದಲ್ಲಿ ಕುದಿಯುತ್ತಿದೆ."

ಡೇಮಿಯನ್ ಭಗವಂತನ ಭಕ್ತನಾಗಿದ್ದ, ಕ್ರೈಸ್ತಮತದ ಅನುಯಾಯಿಯಾಗಿದ್ದ. "ಒಬ್ಬ ಶಿಲ್ಪಿಯ ಕೈಯಲ್ಲಿನ ಉಳಿಯಂತೆ

ನನ್ನ ಜೀವನ ದೇವರ ಕೈಯಲ್ಲಿನ ಉಪಕರಣವಾಗಲಿ, ನನ್ನ ಜೀವನ ಹಾಗೂ ಸಾವು ಭಗವಂತನಿಗೆ ಸೇರಿದ್ದು" ಎಂದು ಮತ್ತೆ ಮತ್ತೆ ಹೇಳುತ್ತಿದ್ದ. ಕರ್ಮಯೋಗಿಯು ಕಡಿಮೆ ಮಾತನಾಡುತ್ತಾನೆ. ತನ್ನ ವಿಶ್ವಾಸವನ್ನು ಕಾರ್ಯದಲ್ಲಿ ತೋರಿಸುತ್ತಾನೆ. ಡೇಮಿಯನ್ ಅಂತಹ ವ್ಯಕ್ತಿಯಾಗಿದ್ದ. ಧೈರ್ಯದಿಂದ ಮುನ್ನಡೆ, ಎಂದು ಅವನ ಮನಸ್ಸು ಸದಾ ಹಾಡುತ್ತಿತ್ತು. ಒಮ್ಮೆ ನಿರ್ಧಾರ ಮಾಡಿದ ಮೇಲೆ ಅಂತಹವರು ಮತ್ತೆ ಹಿಮ್ಮೆಟ್ಟುವುದಿಲ್ಲ. ನಿನ್ನದು ಒಂಟಿ ಜೀವನ ವಾಗುವುದು ಎಂದು ಅವನ ಸ್ನೇಹಿತರು ಎಚ್ಚರಿಸಿದ್ದರು. ಭಗವಂತನಿಲ್ಲದ ಜೀವನವೇ ನಿಜವಾಗಿ ಒಂಟಿ ಜೀವನ ತನ್ನದಲ್ಲ, ಎಂದು ಅರಿತಿದ್ದ. ಅವನು ಮಲಕಾಯ್‌ಗೆ ಹೋಗುತ್ತಿದ್ದುದೇ ತನ್ನ ಇಷ್ಟದೇವತೆಯ ಸಾನ್ನಿಧ್ಯ ಪಡೆಯಲು, ಅವನೊಡನೆ ಸಂಪರ್ಕ ಬೆಳೆಸಲು. ಭಗವಂತನ ನತದೃಷ್ಟ ಮಕ್ಕಳ ಸೇವೆಯೇ ಭಗವಂತನಿಗೆ ಪ್ರಿಯವಾದ ಸೇವೆ ಎಂಬುದನ್ನು ಅರಿತಿದ್ದ. ಹಾಗಿರುವಾಗ ಒಂಟಿತನವೆಲ್ಲಿ?

ಏಸುಕ್ರಿಸ್ತನ ಈ ವಾಕ್ಯ ಅವನ ಮನಸ್ಸನ್ನು ತುಂಬಿತ್ತು: " **ಎಲ್ಲರೂ ಕೈಬಿಟ್ಟ ನನ್ನ ಇಂತಹ ಮಕ್ಕಳ ಸೇವೆಯೇ ನನ್ನ ಸೇವೆ.**" ಮಹತ್ತಾದ ತ್ಯಾಗಜೀವನಕ್ಕೆ ತನ್ನ ಜೀವನವನ್ನೇ ಮುಡಿಪಾಗಿಟ್ಟ ಡೇಮಿಯನ್ ಮಲಕಾಯ್ ಕಡೆಗೆ ಪ್ರಯಾಣ ಬೆಳೆಸಿದ. ಅವನ ಸ್ನೇಹಿತರೆಲ್ಲ ನೀರು ತುಂಬಿದ ಕಣ್ಣುಗಳಿಂದ ಬೀಳ್ಕೊಟ್ಟರು. ಅವರ ಹೊರ ಮನಸ್ಸು ಅವನ ತ್ಯಾಗಕ್ಕೆ ಪ್ರೋತ್ಸಾಹ ಕೊಡದಿದ್ದರೂ ಒಳಮನಸ್ಸಿನಿಂದ ಪೂರ್ಣವಾಗಿ ಆಶೀರ್ವದಿಸಿದರು. ಅವನನ್ನು ನೆನೆದು ಹೆಮ್ಮೆಪಟ್ಟರು. ಆದರೆ ಈ ತರುಣ ಧೀರನಲ್ಲಿ ಯಾವ ಭಯವೂ, ಕಾತರತೆಯೂ ಕಾಣಲಿಲ್ಲ. ಭವಿಷ್ಯದ ಚಿಂತೆ ಇರಲಿಲ್ಲ. ಅವನ ಹೊಳೆಯುವ ಕಣ್ಣುಗಳೂ, ಆನಂದ ತುಂಬಿದ ಹೃದಯವೂ ಮೌನವಾಗಿ ಹಾಡುತ್ತಿದ್ದುವು.

ನಾನು ನೀವು ನೆನೆವಂತೆ ಏಕಾಂಗಿಯಲ್ಲ,
ನನ್ನೊಡನೆ ಬರುತಿಹನು ನನ್ನ ನೆಚ್ಚಿನ ದೇವನು.
ನನ್ನೊಡನೆ, ನನ್ನ ಒಳಗಡೆಯೂ!
ಸಮುದ್ರದ ಮೇಲೆ ನೃತ್ಯಗೈಯ್ಯುತ್ತ
ನಿಮ್ಮ ಕೈಬೀಸುವಿಕೆಗೆ ತಾಳಹಾಕುತ್ತ
ಮುಂದೆ ಸಾಗಲಿ ನನ್ನ ಜೀವನದ ದೋಣಿ,
ದೇವರೊಡನೆ ಹೋಗುವೆನು,
                    ದೇವರಿರುವೆಡೆಗೆ ಹೋಗುವೆನು,
ಅವನೆಡೆಗೆ ಓಡುವೆನು,
                ಅದೊ ಕೈಚಾಚಿ ಕರೆಯುತಿರುವನವನು
ಅವನ ಮಕ್ಕಳ ಸೇವೆಯೇ ಅವನ ಸೇವೆ,
                    ಅದುವೇ ನನ್ನ ಆನಂದ.

ಮಲಕಾಯ್ ಸೇರಿದ ಫಾದರ್ ಡೇಮಿಯನ್‌ಗೆ ನಗುಮುಖದ ಸ್ವಾಗತ ಕಾದಿರಲಿಲ್ಲ. ದ್ವೀಪದ ಮೂಲೆಮೂಲೆಗಳಲ್ಲಿ ಸುಮಾರು ೮೦೦ ಕುಷ್ಠರೋಗಿಗಳು ನರಳುತ್ತಿದ್ದರು. ಸುಮಾರು ೨೦೦೦ ಅಡಿ ಉದ್ದದ ಗೋಡೆ ಹೊರ ಪ್ರಪಂಚದಿಂದ ಅವರನ್ನು ಬೇರ್ಪಡಿಸಿತ್ತು. ಅವರೆಲ್ಲ ನಡೆದಾಡುವ ಶವಗಳಂತಿದ್ದರು. ಹುಳುಗಳು ಅವರ ದೇಹದ ಹುಣ್ಣುಗಳನ್ನು ಕಿತ್ತು ತಿನ್ನುತ್ತಿದ್ದವು. ಅವರ ಮುಖಗಳಲ್ಲಿ ಜೀವನದ ಯಾವ ಆಶಾಕಿರಣವೂ ಉಳಿದಿರಲಿಲ್ಲ. ಅವರೆಲ್ಲ ಸಾವಿನ ಬರವಿಗಾಗಿ ಕಾತರರಾಗಿ ಕಾಯುತ್ತಿದ್ದಂತಿತ್ತು. ಸಾವು ಅವರಿಗೆ ಸ್ವಾತಂತ್ರ್ಯದ ಮಾರ್ಗವಾಗಿತ್ತು. ಡೇಮಿಯನ್ ಹೋದಲ್ಲೆಲ್ಲ ಬತ್ತಿದ ಕಣ್ಣುಗಳ, ಮೌನದೃಷ್ಟಿಯ ಸ್ವಾಗತ ಮಾತ್ರ ಕಾದಿತ್ತು. ಕುಷ್ಠರೋಗದ ಚಿಹ್ನೆ ಇಲ್ಲದ ಈ ವಿಚಿತ್ರ ಜೀವಿ ಯಾರು ಎಂದು ಅವರ ದೃಷ್ಟಿ ಅವನನ್ನು ಪ್ರಶ್ನಿಸುವಂತಿತ್ತು. ಇಂತಹ ಆರೋಗ್ಯಕರ ವ್ಯಕ್ತಿ ಜಗತ್ತಿನಲ್ಲಿ ಇರಬಲ್ಲ ಎಂಬುದೆ ಅವರಿಗೆ ಮರೆತುಹೋಗಿತ್ತು.

ಅವರಿಗೆ ಜೀವನದಲ್ಲಿ ಭರವಸೆಯಿರಲಿಲ್ಲ. ಆದರೇನಂತೆ? ಭಗವಂತನಿಗಾಗಿ ಅವರನ್ನು ಪ್ರೀತಿಸಬೇಕಾಗಿತ್ತು. ಅವರೆಲ್ಲ ಅವನಿಗೆ ನಡೆದಾಡುತ್ತಿದ್ದ, ಜೀವಂತವಾಗಿದ್ದ ತನ್ನ ಭಗವಂತನ ಹಲವು ಪ್ರತಿಬಿಂಬಗಳಾಗಿದ್ದರು. ಅವರ ಜೀವನವನ್ನು ಪ್ರವೇಶಿಸಲು ಅವನಿಗೆ ಬಹಳ ಸಮಯ ಬೇಕಾಗಲಿಲ್ಲ. ತಾನು ಅವರೆಲ್ಲರ ಬಂಧು, ಅವರ ಸೇವೆಯೇ ತನ್ನ ಜೀವನದ ಧ್ಯೇಯ, ಅವರ ನೋವೇ ತನ್ನ ನೋವು, ಅವರ ಸಂತೋಷವೇ ತನ್ನ ಸಂತೋಷ ಎಂಬುದನ್ನು ಅವರಿಗೆ ಬೇಗ ಅರ್ಥ ಮಾಡಿಸಿದ. ಆ ರೋಗಿಗಳ ಪಾಲಿಗೆ ದೇವದೂತನೇ ಪ್ರತ್ಯಕ್ಷವಾಗಿ ಬಂದಂತೆ ಆಯಿತು. ಮತ್ತೆ ಅವರ ಕಣ್ಣುಗಳಲ್ಲಿ ಆಶಾಕಿರಣ ಮೂಡಿತು. ದೇವರ ಕರುಣೆಯನ್ನು ಆ ರೋಗಿಗಳು ಅನುಭವಿಸಿದರು!

ಮುದುಡಿದ್ದ ಮನಗಳು ಅವನ ಸಾಂತ್ವನದ, ಪ್ರೀತಿಯ ಮಾತುಗಳಿಂದ ನಿಧಾನವಾಗಿ ಅರಳುವಂತಾದವು. ದೇವನೊಬ್ಬನಿರುವನು ಎಂಬುದನ್ನೇ ಮರೆತಿದ್ದ, ಬಂಜರು ಭೂಮಿಯಂತಿದ್ದ ಅವರ ಮನಗಳಿಗೆ ಅವನ ಪ್ರೀತಿಯ ಮಾತುಗಳು ತಂಪಿನ ಮಳೆನೀರುಣಿಸಿದವು.

"ದುಃಖಿತರೇ ಭಗವಂತನ ಪ್ರೀತಿಯ ಮಕ್ಕಳು. ಅವರೆಲ್ಲ ಅತ್ಯಂತ ಭಾಗ್ಯಶಾಲಿಗಳು, ಏಕೆಂದರೆ ಇವರ ಮೇಲಿರುವಷ್ಟು ಪ್ರೀತಿ ಭಗವಂತನಿಗೆ ಬೇರೆ ಯಾರ ಮೇಲೂ ಇಲ್ಲ. ಭಗವಂತನನ್ನು ಒಮ್ಮೆ ನಂಬಿದರೆ ಸಾಕು, ಅವನು ಎಲ್ಲರನ್ನೂ ಅಪ್ಪಿಕೊಂಡು, ಆನಂದ ನೀಡಿ ತನ್ನಲ್ಲಿ ಸೆಳೆದುಕೊಳ್ಳುವನು." ಇಂತಹ ಮಾತುಗಳನ್ನು ಹೇಳುತ್ತಾ ಡೇಮಿಯನ್ ಅವರ ಗಾಯಗಳನ್ನು ಸ್ವಲ್ಪವೂ ಅಸಹ್ಯಪಡದೆ ತೊಳೆದು, ಉಪಚರಿಸುತ್ತಿದ್ದ. ಅವು ನೇರವಾಗಿ ಅವರ ಹೃದಯವನ್ನು ತಲುಪುತ್ತಿದ್ದವು. ಅಷ್ಟೇ ಅಲ್ಲ, ಅವರೆಲ್ಲ ನೋವು ನಲಿವಿನ ಆಚೆಯಿದ್ದ ಆ ಭಗವಂತನ ಪ್ರೇಮದ ಸವಿಯನ್ನು ಸವಿಯಲಾರಂಭಿಸಿದರು. ಕಣ್ಣುಗಳಲ್ಲಿ ಕಾಂತಿ ತುಂಬಿತು. ಆ ನೋವಿನ ದೇಹಕ್ಕೂ, ತಮಗೂ ಯಾವ ಸಂಬಂಧವೂ ಇಲ್ಲವೇನೋ ಎಂಬ ಭಾವನೆ ಬರಲಾರಂಭಿಸಿತು.

ತಾವು ದೇಹಾತೀತರು ಎಂಬ ವೇದಾಂತದ ಸತ್ಯವು ಅವರ ಅನುಭವಕ್ಕೆ ಬಂದಿರಬೇಕು.

ಒಬ್ಬ ತ್ಯಾಗಿ, ಭಗವಂತನ ದೂತ, ಎಂತಹ ಪ್ರೇಮವನ್ನು ನೂರಾರು ಜೀವಿಗಳ ಮನದಲ್ಲಿ ತುಂಬಿದನು! ಡೇಮಿಯನ್ ನಮ್ಮನ್ನು ಪ್ರೀತಿಸುತ್ತಾನೆ. ಭಗವಂತ ನಮ್ಮನ್ನು ಪ್ರೀತಿಸುತ್ತಾನೆ ಎಂಬ ನಂಬಿಕೆ ಅವರ ಹೃದಯದಲ್ಲಿ ತುಂಬಿತು. ನಮಗಾಗಿ ಈ ಸತ್ಪುರುಷ ತನ್ನ ಜೀವನವನ್ನು ಅರ್ಪಿಸಿದ್ದಾನೆ, ನಾವೂ ಅವನು ಹೇಳಿದಂತೆ ಕೇಳೋಣ ಎಂಬ ನಂಬಿಕೆಯನ್ನು ತಮ್ಮ ಹೃದಯದಲ್ಲಿ ತುಂಬಿಕೊಂಡರು. ನಂತರ ಡೇಮಿಯನ್‌ನ ಕಾರ್ಯ ಸುಲಭವಾಯಿತು. ಅವರೆಲ್ಲರ ಹೃದಯಗಳಲ್ಲಿ ಭಗವಂತನಲ್ಲಿ ವಿಶ್ವಾಸ ಮೂಡುವಂತೆ ಮಾಡಿದ. ಅವರೆಲ್ಲರಿಗೂ ಮನೆಗಳನ್ನು ಕಟ್ಟಿಕೊಟ್ಟ, ಅವರ ಮಕ್ಕಳಿಗೆ ಶಾಲೆಗಳನ್ನು ತೆರೆದ. ಅವರ ಸುವ್ಯವಸ್ಥಿತ ಜೀವನಕ್ಕೆ ಬೇಕಾದ ಎಲ್ಲಾ ಏರ್ಪಾಡುಗಳನ್ನು ಮಾಡಿದ. ಅವರಿಗೆ ಮಾಡುತ್ತಿದ್ದ ಪ್ರತಿಯೊಂದು ಸೇವೆಯಲ್ಲೂ, ಭಗವಂತ ನಗುನಗುತ್ತಾ ತನ್ನ ಸೇವೆಯನ್ನು ಸ್ವೀಕರಿಸುವುದನ್ನು ಪ್ರತ್ಯಕ್ಷವಾಗಿ ಕಂಡ. ನಲಿವಿನಲ್ಲಿ ಕಾಣಸಿಗದ ತನ್ನ ಭಗವಂತ, ನೋವಿನಲ್ಲಿ ನೂರಾಗಿ, ಸಾವಿರವಾಗಿ ಕಣ್ಣು ಹರಿಸಿದಲ್ಲೆಲ್ಲಾ ಕಾಣಸಿಕ್ಕಿದ. ಧನ್ಯ ಡೇಮಿಯನ್‌ನ ಜೀವನ, ಯಾತನೆಯಲ್ಲೂ ಭಗವಂತನ ತಾಣವನ್ನು ಕಂಡ ಜೀವನ!

✡

# ಪುಸ್ತಕ ❀ ಪರಿಚಯ

## ಶ್ರೀರಾಮಕೃಷ್ಣರ ಸಂನ್ಯಾಸೀ ಶಿಷ್ಯರು ಕಂಡಂತೆ ಶ್ರೀಮಾತೆಯವರು

**ಸಂಕಲನ: ಸ್ವಾಮಿ ರಾಘವೇಶಾನಂದ**

**ಪ್ರಕಾಶಕರು : ಅಧ್ಯಕ್ಷರು, ರಾಮಕೃಷ್ಣ ಮಠ,**

**ಸ್ವಾಮಿ ವಿವೇಕಾನಂದ ರಸ್ತೆ, ಹಲಸೂರು - ೫೬೦ ೦೦೮**

**ಪುಟ : ೫೬ ಬೆಲೆ : ರೂ ೩೦/-**

ಬೆಂಗಳೂರಿನ ಬಸವನಗುಡಿಯಲ್ಲಿರುವ ರಾಮಕೃಷ್ಣ ಮಠದ ಶತಮಾನೋತ್ಸವದ ಸಂದರ್ಭದಲ್ಲಿ ಈ ಕಿರುಹೊತ್ತಿಗೆಯ ಬಿಡುಗಡೆ ಆಯಿತು. ಆಂಗ್ಲ ಭಾಷೆ ಹಾಗೂ ಕನ್ನಡದಲ್ಲಿ ಪ್ರಕಟವಾಗಿರುವ ಈ ಪುಸ್ತಕವು ಶ್ರೀಮಾತೆಯ ಹಿರಿಯ ವ್ಯಕ್ತಿತ್ವ ಹಾಗೂ ಮಹಿಮೆಗೆ ಒಂದು ಕಿರುಗನ್ನಡಿ. ಪ್ರತಿಬಿಂಬವು ಮೂಲದ ವಿಶಾಲತೆಯನ್ನು, ಸೌಂದರ್ಯವನ್ನು, ತೇಜಸ್ಸನ್ನು ದೋಷವಿಲ್ಲದೆ ತೋರುವಂತೆ ಈ ಹೊತ್ತಿಗೆ ಶ್ರೀಮಾತೆಯನ್ನು ಸಮರ್ಪಕವಾಗಿ ಚಿತ್ರಿಸುತ್ತದೆ.

ಮಕ್ಕಳಿಗಿಂತ ತಾಯಿಯನ್ನು ಸಮರ್ಪಕವಾಗಿ ಅರಿಯಬಲ್ಲವರು ಯಾರಿದ್ದಾರೆ? ಇವರಾದರೋ ಸಾಮಾನ್ಯ ತಾಯಿಯಲ್ಲ, ಜಗಜ್ಜನನಿ. ಅವರನ್ನು ತಿಳಿಯಲು ವಿಶೇಷ ತಯಾರಿ ಬೇಕು. ಆಧ್ಯಾತ್ಮಿಕ ಸಾಧನೆಗಾಗಿ ಇಡೀ ಜೀವನವನ್ನೇ ಮುಡಿಪಾಗಿಟ್ಟಿದ್ದ, ಅದರಲ್ಲೂ ಈಶ್ವರ ಕೋಟಿಗಳು ಎಂದು ಕರೆಸಿಕೊಂಡ, ಶ್ರೀರಾಮಕೃಷ್ಣ ಪರಮಹಂಸರೊಂದಿಗೆ ಅವರ ಲೀಲೆಯಲ್ಲಿ ಭಾಗಿಗಳಾಗಲು ಜೊತೆಗೂಡಿ ಬಂದಿದ್ದ ೧೩ ಶಿಷ್ಯರು ಶ್ರೀಮಾತೆಯ ಬಗ್ಗೆ ಶ್ರದ್ಧಾಭಕ್ತಿಗಳಿಂದ ಹೇಳಿರುವ ನುಡಿಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಎನಿತೋ ಕಾಲದಿ ನಿನ್ನ ಬಳಿಯೆ ನಾನಿದ್ದರೂ
ನನ್ನ ಸೋಲನು ನಾನು ಒಪ್ಪಿಕೊಳ್ಳುವೆನೀಗ—
ಅರಿಯದಾದೆನೆ ನಿನ್ನ ಎಂದೆಂದಿಗೂ!

ಎಂದು ಸ್ವಾಮಿ ಶಾರದಾನಂದರು ನಮ್ರತೆಯಿಂದ ಬರೆದಿದ್ದರೂ ಕೂಡ ಈ ಶಿಷ್ಯರಿಗೆ ಶ್ರೀಮಾತೆಯವರ ದಿವ್ಯವ್ಯಕ್ತಿತ್ವದ ನಿಕಟ ಪರಿಚಯವಿತ್ತು ಎಂದು ತಿಳಿದುಬರುತ್ತದೆ.

"ನನಗೆ ಶ್ರೀರಾಮಕೃಷ್ಣರ ನಾಮಕ್ಕಿಂತ ಶ್ರೀಮಾತೆಯವರ ನಾಮಸ್ಮರಣೆ ಹೆಚ್ಚು ಶಕ್ತಿಯನ್ನು ಕೊಡುತ್ತದೆ" ಎನ್ನುವ ಸ್ವಾಮಿ ವಿಜ್ಞಾನಾನಂದರ ಭಕ್ತಿ ಒಂದೆಡೆಯಾದರೆ, "ಜಗನ್ಮಾತೆಯ ಕೃಪೆಗೆ ಹೋಲಿಕೆ ಎಲ್ಲಿದೆ!" ಎಂದು ಕೊಂಡಾಡುವ ಸ್ವಾಮಿ ಅದ್ಭುತಾನಂದರ ನುಡಿ ಮತ್ತೊಂದೆಡೆ. "ಶ್ರೀಮಾತೆಯವರ ಕೃಪೆ ದೊರೆತಿರುವವರು ಅರ್ಥ ಮಾಡಿಕೊಳ್ಳಬೇಕು, ಇದು ಹಲವಾರು ಜನ್ಮಗಳ ತಪಸ್ಸಿನ ಫಲ ಎಂದು. ಯಾವಾಗ ಶ್ರೀಮಾತೆಯವರು ನಿನ್ನ ಮೇಲೆ ಕೃಪೆ ತೋರಿದ್ದಾರೋ ಆಗಿನಿಂದಲೇ ನಿನ್ನ ವಿಧಿ ಬದಲಾಯಿಸಿದೆ ಎಂದು ತಿಳಿ" ಎನ್ನುವ ಸ್ವಾಮಿ ಸುಬೋಧಾನಂದರ ಪ್ರೇಮಾಭಕ್ತಿಗೆ ಭಕ್ತರ ಶಿರಗಳು ಮಣಿಯುವುವು.

ಶ್ರೀಮಾತೆ ಸ್ವತಃ ಮಹಾಮಾಯೆ. ಆಗೊಮ್ಮೆ ಈಗೊಮ್ಮೆ ಅನಿರೀಕ್ಷಿತವಾಗಿ ತಮ್ಮ ದಿವ್ಯತೆ, ಮಹಿಮೆಗಳ ಬಗ್ಗೆ ಹೇಳಿಬಿಡುತ್ತಿದ್ದರು. ಅತಿಸಾಮಾನ್ಯ ಮಹಿಳೆಯಂತೆ ಇರುವುದೇ ಅವರಿಗೆ ಪ್ರಿಯವಾಗಿತ್ತು. ಹಿರಿಯ ಆಸನವಿಲ್ಲ, ಆಡಂಬರದ ಅಲಂಕಾರಗಳಿಲ್ಲ, ಕಂಗೆಡಿಸುವ ಪ್ರಕಾಶವಿಲ್ಲ. ಎಲ್ಲವೂ ಮಾತೃವಾತ್ಸಲ್ಯದ ನೀರವತೆ, ಸರಳತೆಯಿಂದ ಆವೃತವಾಗಿತ್ತು. ಶ್ರೀಮಾತೆಯ ಚಿತ್ರಗಳೇ ಇದಕ್ಕೆ ಸಾಕ್ಷಿ. ಪುಸ್ತಕದಲ್ಲಿ ಶ್ರೀಮಾತೆ ಹುಟ್ಟಿದ ಸ್ಥಳ, ಬೇಲೂರು ಮಠದಲ್ಲಿರುವ ಅವರ ದೇವಸ್ಥಾನ, ದಕ್ಷಿಣೇಶ್ವರದಲ್ಲಿ ಅವರಿದ್ದ ಕೋಣೆ ಹಾಗೂ ಬೇರೆ ಬೇರೆ ಸಂದರ್ಭಗಳಲ್ಲಿ ತೆಗೆದಿರುವ ಅವರ ಚಿತ್ರಗಳನ್ನು ಮುದ್ರಿಸಿದ್ದಾರೆ. ವೈಶಿಷ್ಟ್ಯವೆಂದರೆ ಪ್ರತಿಯೊಂದು ಚಿತ್ರದ ಕೆಳಗೆ ಅದನ್ನು ತೆಗೆದ ಸ್ಥಳ, ಇಸವಿ ಮುಂತಾದ ವಿವರಗಳನ್ನು ನೀಡಲಾಗಿದೆ. ಚಿತ್ರಗಳನ್ನು ಸುಂದರವಾದ ಆರ್ಟ್ ಕಾಗದದ ಮೇಲೆ ಮುದ್ರಿಸಲಾಗಿದೆ. ಕಂಪ್ಯೂಟರ್ ಕೈಚಳಕದಿಂದ ಚಿತ್ರಗಳು ಹೆಚ್ಚು ಆಕರ್ಷಣೀಯವೆನಿಸಿದರೂ ಕೆಲವು ಭಾವಚಿತ್ರಗಳು ತಮ್ಮ ಅಸಲನ್ನು ಕಳೆದುಕೊಂಡಿವೆ ಎನಿಸದಿರುವುದಿಲ್ಲ. ನಿಸರ್ಗವು ಶ್ರೀಮಾತೆಯವರ ದಿವ್ಯತೆಯ ವಿರಾಟ್ ಅಭಿವ್ಯಕ್ತಿ ಎಂದು ತೋರಿಸಲೋ ಏನೋ ಎಂಬಂತೆ ಪ್ರಾಕೃತಿಕ ಸೌಂದರ್ಯವನ್ನು ಸೆರೆಹಿಡಿದಿರುವ ಕೆಲವು ಚಿತ್ರಗಳನ್ನು ಸೇರಿಸಲಾಗಿವೆ.

ಶ್ರೀಮಾತೆಯವರು ಬೆಂಗಳೂರಿಗೆ ಬಂದಿದ್ದಾಗ ಕಲ್ಲುಬಂಡೆಯ ಮೇಲೆ ಕುಳಿತು ಧ್ಯಾನ ಮಾಡಿದ್ದರು ಎಂಬ ವಿಷಯವನ್ನು ೩೭ನೇ ಪುಟದಲ್ಲಿ ನೀಡಿದ್ದಾರಾದರೂ ಆ ಸ್ಥಳದ ಚಿತ್ರ ಇದ್ದಿದ್ದರೆ ಸಮರ್ಪಕವಾಗುತ್ತಿತ್ತು. ಮೂರು, ನಾಲ್ಕು ಮುದ್ರಣ ದೋಷಗಳನ್ನು ಬಿಟ್ಟರೆ ಉಳಿದೆಲ್ಲ ರೀತಿಯಲ್ಲಿ ಪುಸ್ತಕವು ಚೆನ್ನಾಗಿ ಮೂಡಿ ಬಂದಿದೆ. ಹಾಗೂ ಶ್ರೀಮಾತೆಯವರನ್ನು ಅರಿತವರಲ್ಲಿ ಮೊದಲಿಗರಾದ ನೇರ ಶಿಷ್ಯರ ಅಭಿಪ್ರಾಯಗಳೆಲ್ಲ ಒಂದೇ ಕಡೆ ಸಂಗ್ರಹವಾಗಿರುವುದು ಸಾಧಕರಿಗೆ ಬಹು ಉಪಯುಕ್ತವಾಗಿದೆ. ಇಂತಹ ಅಮೂಲ್ಯ ಪುಸ್ತಕವನ್ನು ಇಷ್ಟು ಕಡಿಮೆ ಬೆಲೆಗೆ ಪ್ರಕಟಗೊಳಿಸಿದ ಸ್ವಾಮಿ ರಾಘವೇಶಾನಂದರಿಗೆ ಅಭಿನಂದನೆ ಸಲ್ಲಬೇಕು.

— ಕುಮಾರಿ ಸ್ವರ್ಣಗೌರಿ, ಮೈಸೂರು